
## ನಿಮ್ಮೊಡನೆ

# ಶಾಸನಸಭೆಗಳಲ್ಲಿ ಮಹಿಳಾದನಿ ಮೊಳಗಲಿ ಸ್ತ್ರೀ ಸಬಲೀಕರಣಕ್ಕೆ ಪಕ್ಷಗಳು ಬದ್ಧತೆ ತೋರಲಿ

**ಶಾಸನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ನೀಡುವ ನಿಯಮ 2029ರ ಚುನಾವಣೆಯಲ್ಲಿ ಜಾರಿಗೆ ಬರಲಿದೆ ಎಂಬುದು ಸಂಭ್ರಮಿಸುವಂತಹ ಸಂಗತಿಯಾದರೂ, ಮೀಸಲಾತಿಯ ಮೂಲಕವೇ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸಬೇಕಾದಂತಹ ಅನಿವಾರ್ಯ ಸ್ಥಿತಿ ಇರುವುದು ನಮ್ಮ ರಾಜಕೀಯ ವ್ಯವಸ್ಥೆಗೆ ಶೋಭೆ ತರುವ ಸಂಗತಿಯಲ್ಲ.**



ಈಶ್ವರ್

'ಮಹಿಳೆ ಅರ್ಧ ಆಕಾಶದ ಒಡತಿ' ಎಂದು ಚೀನಾ ಕ್ರಾಂತಿಯ ಹರಿಕಾರ ಮಾವೊ ತ್ಸೆ ತುಂಗ್ ಪ್ರತಿಪಾದಿಸಿದ್ದರು. ಆದರೆ, ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಯಾದಿಯಲ್ಲಿ ಮೊದಲ ಎರಡೂ ಸ್ಥಾನಗಳನ್ನು ಆಕ್ರಮಿಸಿಕೊಂಡಿರುವ ಭಾರತ, ಚೀನಾ ಸೇರಿದಂತೆ ಜಗತ್ತಿನ ಬಹುಪಾಲು ರಾಜಕೀಯ ವ್ಯವಸ್ಥೆಗಳಲ್ಲಿ ಮಹಿಳೆಯನ್ನು ಅಂಚಿಗೆ ನೂಕಲಾಗಿದೆ. ನಮ್ಮಲ್ಲಿ ಲೋಕಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭೆಗಳಲ್ಲಿ ಅವರ ಪ್ರಾತಿನಿಧ್ಯವು ಈಗಲೂ ಕನಿಷ್ಠ ಮಟ್ಟದಲ್ಲೇ ಇದೆ.

ಶಾಸನಸಭೆಗಳಲ್ಲಿ ಶೇಕಡ 33ರಷ್ಟು ಸ್ಥಾನಗಳನ್ನು ಮಹಿಳೆಗೆ ಮೀಸಲಿಡಬೇಕೆಂಬ ಆಶಯ ಮಸೂದೆಯ ರೂಪ ತಳೆದದ್ದು 1996ರಲ್ಲಿ. ಎಚ್.ಡಿ. ದೇವೇಗೌಡ ಪ್ರಧಾನಿಯಾಗಿದ್ದಾಗ ಸಂಸತ್ತಿನಲ್ಲಿ ಮಂಡನೆಯಾಯಿತು. ಆದರೆ ಅದಕ್ಕೆ ಮುಕ್ತಿ ದೊರೆತದ್ದು 2023ರ ಸೆಪ್ಟೆಂಬರ್ ತಿಂಗಳಲ್ಲಿ– ಸುಮಾರು 27 ವರ್ಷಗಳ ಬಳಿಕ! ಸಂಸತ್ತಿನ ಅಂಗೀಕಾರ ದೊರೆತರೂ 2024ರ ಲೋಕಸಭಾ ಚುನಾವಣೆಗೆ ಅನ್ವಯವಾಗುವಂತಹ ಭಾಗ್ಯ ಒಲಿಯಲಿಲ್ಲ.

ಹೊಸದಾಗಿ ಜನಗಣತಿ ಪೂರ್ಣಗೊಂಡು, ಕ್ಷೇತ್ರ ಪುನರ್ ವಿಂಗಡಣೆಯ ಬಳಿಕವಷ್ಟೇ ಶಾಸನಸಭೆಗಳಲ್ಲಿ ಮಹಿಳೆಯರ ಮೀಸಲಾತಿಗೆ ಸಂಬಂಧಿಸಿದ ನಿಯಮ ಜಾರಿಗೆ ಬರಲಿದೆ. ಎಲ್ಲವೂ ಅಂದುಕೊಂಡಂತೆ ಜರುಗಿದರೆ, 2029ರ ಲೋಕಸಭಾ ಚುನಾವಣೆಗೆ ಮಹಿಳೆಯರಿಗೆ ಮೀಸಲು ಸೌಲಭ್ಯ ದೊರೆಯಲಿದೆ. ಈ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಈ ಸಲದ ಚುನಾವಣೆಯನ್ನು ಮಹಿಳಾ ಮೀಸಲು ಸೌಲಭ್ಯವಿಲ್ಲದೆ ನಡೆಯುವ ಕೊನೆಯ ಚುನಾವಣೆ ಎಂದು ಪರಿಗಣಿಸಬಹುದು. ಈ ನೆಲೆಯಲ್ಲಿ ಪ್ರಮುಖ ಪಕ್ಷಗಳಿಂದ ಮಹಿಳೆಯರ ಸ್ಪರ್ಧೆಗೆ ಸಿಗಬಹುದಾದ ಅವಕಾಶವನ್ನು ಅವಲೋಕಿಸಬೇಕಿದೆ.

ಲೋಕಸಭೆಯಲ್ಲಿ ಕರ್ನಾಟಕವನ್ನು ಈಗ ಮೂವರು ಮಹಿಳೆಯರಷ್ಟೇ ಪ್ರತಿನಿಧಿಸುತ್ತಿದ್ದಾರೆ. ಶೋಭಾ ಕರಂದ್ಲಾಜೆ, ಸುಮಲತಾ ಮತ್ತು ಮಂಗಲಾ ಸುರೇಶ್ ಅಂಗಡಿ ಅವರು ಅವಧಿ ಪೂರ್ಣಗೊಳಿಸುತ್ತಿರುವ ಲೋಕಸಭೆಯಲ್ಲಿ ಸದಸ್ಯರಾಗಿದ್ದಾರೆ. ಸಚಿವರಾಗಿದ್ದ ಸುರೇಶ ಅಂಗಡಿ ಅವರ ಅಕಾಲಿಕ ಮರಣದ ಕಾರಣದಿಂದ ಜರುಗಿದ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಅವರ ಪತ್ನಿ ಮಂಗಲಾ ಅವರಿಗೆ ಅವಕಾಶ ದೊರೆತದ್ದರಿಂದ ಲೋಕಸಭೆಗೆ ಪ್ರವೇಶಿಸಲು ಸಾಧ್ಯವಾಯಿತು. ಇವರನ್ನು ಹೊರತುಪಡಿಸಿ ಹೇಳುವುದಾದರೆ 28 ಕ್ಷೇತ್ರಗಳ ಪೈಕಿ ಗೆಲುವು ಕಂಡದ್ದು ಇಬ್ಬರು ಮಹಿಳೆಯರು ಮಾತ್ರ.

ರಾಜ್ಯದಲ್ಲಿ ಈ ಸಲ ನೇರ ಸ್ಪರ್ಧೆ ಇರಲಿದೆ. ಬಿಜೆಪಿ–ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿರುವುದರಿಂದ ಕಾಂಗ್ರೆಸ್ ಮತ್ತು ಈ ಮೈತ್ರಿಕೂಟದ ಮಧ್ಯೆ ಹಣಾಹಣಿ ನಡೆಯಲಿದೆ. ಎರಡೂ ಕಡೆಯ ಅವಕಾಶ ಪರಿಗಣಿಸಿದರೆ 56 ಮಂದಿ ಹುರಿಯಾಳುಗಳು. ಇವರಲ್ಲಿ ಎಷ್ಟು ಮಂದಿ ಮಹಿಳೆಯರು ಇರಲಿದ್ದಾರೆ ಎಂಬುದು ಕುತೂಹಲದ ಸಂಗತಿ. ಪಕ್ಷಗಳ ಪ್ರಣಾಳಿಕೆಯಲ್ಲಿ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದ ವಿಷಯಗಳು ಈಚಿನ ವರ್ಷಗಳಲ್ಲಿ ಹೆಚ್ಚು ಪ್ರಾಮುಖ್ಯ ಪಡೆಯುತ್ತಿವೆ. ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಮತದ ಮೌಲ್ಯ ಹೆಚ್ಚಿರುವುದರ ಸೂಚಕವಾಗಿಯೂ ಮತ್ತು ಮಹಿಳೆಯರು ಸ್ವತಂತ್ರವಾಗಿ ಯೋಚಿಸಿ ಮತ ಚಲಾಯಿಸುತ್ತಾರೆ ಎಂದು ರಾಜಕೀಯ ಪಕ್ಷಗಳು ಪರಿಗಣಿಸಿರುವುದರ ದ್ಯೋತಕವಾಗಿಯೂ ಈ ಬೆಳವಣಿಗೆಯನ್ನು ಕಾಣಬಹುದು.

ಅಭ್ಯರ್ಥಿಗಳ ಆಯ್ಕೆಗೆ ಈ ಸಲ ಪರಿಗಣನೆಗೆ ಒಳಗಾದ ಹೆಸರುಗಳಲ್ಲಿ ಮಹಿಳೆಯರ ಸಂಖ್ಯೆ ಕಳೆದ ಸಲಕ್ಕಿಂತ ತುಸು ಹೆಚ್ಚಿಗೆ ಇರುವುದು ಸಮಾಧಾನದ ಸಂಗತಿಯಾದರೂ, ಅವರಲ್ಲಿ ಹೆಚ್ಚಿನವರು ರಾಜಕೀಯವಾಗಿ ಈಗಾಗಲೇ ಹಿಡಿತ ಸಾಧಿಸಿರುವ ಪ್ರಭಾವಿ ಕುಟುಂಬಗಳಿಗೆ ಸೇರಿದವರು ಎಂಬುದು ಗಮನಾರ್ಹ. ಮಹಿಳಾ ಮೀಸಲಾತಿ ನಿಯಮ ಜಾರಿಯಾದ ಬಳಿಕ ಎದುರಾಗಬಹುದಾದ ಚಿತ್ರಣದ ಒಂದು ತುಣುಕಾಗಿಯೂ ಈ ಅಂಶ ಕೆಲವರ ಕಣ್ಣೆದುರು ಹಾದುಹೋಗಬಹುದು. ಈ ವಿಚಾರದಲ್ಲಿ ಈಗಲೇ ಒಂದು ನಿರ್ಧಾರಕ್ಕೆ ಬರುವುದು ತರವಲ್ಲವಾದರೂ ಅಂತಹ ಸಾಧ್ಯತೆಯೂ ಇದೆ ಎಂಬುದು ಸುಳ್ಳಲ್ಲ.

ಶಾಸನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವ ಉದ್ದೇಶದ ಮೀಸಲಾತಿ ನಿಯಮ 2029ರ ಚುನಾವಣೆಯಲ್ಲಿ ಜಾರಿಗೆ ಬರಲಿದೆ ಎಂಬುದು ಸಂಭ್ರಮಿಸುವಂತಹ ಸಂಗತಿಯಾದರೂ, ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಮೀಸಲಾತಿಯ ಮೂಲಕವೇ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸಬೇಕಾದಂತಹ ಅನಿವಾರ್ಯ ಸ್ಥಿತಿ ಇರುವುದು ನಮ್ಮ ರಾಜಕೀಯ ವ್ಯವಸ್ಥೆಗೆ ಶೋಭೆ ತರುವಂಥ ಸಂಗತಿ ಇಲ್ಲ.

ದೇಶದ 12 ರಾಜ್ಯಗಳಲ್ಲಿ ಪುರುಷರಿಗಿಂತ ಮಹಿಳಾ ಮತದಾರರೇ ಹೆಚ್ಚಿದ್ದಾರೆ. ಉಚಿತ ಕೊಡುಗೆಗಳು ಹಾಗೂ ನಗದು ರೂಪದಲ್ಲಿ ಕೊಡಮಾಡುವಂಥ ಯೋಜನೆಗಳ ಹೆಸರಿನಲ್ಲಿ ಮಹಿಳೆಯರ ಮತ ಸೆಳೆಯಲು ಹವಣಿಸುವ ರಾಜಕೀಯ ಪಕ್ಷಗಳು ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನೀಡುವಾಗ ಮಾತ್ರ ಮಹಿಳಾಶಕ್ತಿಯನ್ನು ಮರೆಯುವುದೇಕೆ?

ಆಡಳಿತ ನಡೆಸುತ್ತಿರುವ ಪಕ್ಷಗಳು, ಅದರಲ್ಲೂ ತಮ್ಮ ನಾಮಬಲದಿಂದಲೇ ಅಭ್ಯರ್ಥಿಗಳನ್ನು ಗೆಲುವಿನ ದಡ ಸೇರಿಸುವಂತಹ ಸಾಮರ್ಥ್ಯವುಳ್ಳ ನಾಯಕರಿರುವ ಪಕ್ಷಗಳು ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕು. ಮಹಿಳೆಯರ ಸಬಲೀಕರಣಕ್ಕೆ ಬದ್ಧತೆ ತೋರಬೇಕಾದುದು ಈ ದಿಸೆಯಲ್ಲಿ. ನೀತಿ–ನಿಲುವು ರೂಪಿಸುವ ಕಡೆ ಮಹಿಳಾದನಿ ಮೊಳಗುವಂತಾದರೆ ಸಬಲೀಕರಣ ತಾನಾಗಿಯೇ ಸಾಧ್ಯವಾಗುತ್ತದೆ.

**■ ಎನ್. ಉದಯಕುಮಾರ್**